“ಅಂದರೆ ನಿಮ್ಮ ಮಾತು ನಾನೇ ಕೊಲೆಗಾರ ಅಂತಾನಾ? ನಾನೇ ಪಿಜ್ಜಾ ಡೆಲಿವರಿಯವನ ರೀತಿ ಹೋಗಿ ಕೊಲೆ ಮಾಡಿದ್ದೇನೆ ಅಂತ ಹೇಳುತ್ತಿದ್ದೀರಾ? ಮೈ ಫುಟ್, ಗೆಟ್ ಔಟ್!” ಎಂದು ಏರು ಧ್ವನಿಯಲ್ಲಿ ಕಿರುಚಿದ.

“ಹೋಗುತ್ತೇನೆ. ನೀವು ಬೇಡ ಅಂದರೂ ನಾನು ಹೋಗುತ್ತೇನೆ. ಆದರೆ ಕೊಲೆ ಮಾಡಿದ್ದು ನೀವೇ ಅಲ್ಲವಾ? ನೀವೇ ಬೆಳೆಸಿದ ಹುಡುಗ ಅವನು. ನಿಮಗೂ ಅವನಿಗೂ ಯಾವ ಪೈಪೋಟಿ ಇರಲಿಲ್ಲ. ವೃತ್ತಿ ದ್ವೇಷ, ನಿಮ್ಮ ಸೋಲು ನಿಮ್ಮನ್ನು ಈ ಕೆಲಸಕ್ಕೆ ಪ್ರೇರೇಪಿಸಿತು ಅಲ್ಲವಾ?” ಎಂದು ಒಂದೊಂದೇ ಶಬ್ದಗಳನ್ನ ಬಿಡಿಸಿ ಬಿಡಿಸಿ ನಿಧಾನವಾಗಿ ಕೇಳಿದ.

“ಒಪ್ಪಿಕೊಂಡರೂ ಅಷ್ಟೇ, ಇಲ್ಲಾಂದ್ರೂ ಅಷ್ಟೇ, ನಿಮಗೆ ನನ್ನ ಬಗ್ಗೆ ಯಾವ ಸಾಕ್ಷಿಯೂ ಸಿಗಲ್ಲ. ನಾನು ಎಲ್ಲಾ ವ್ಯವಸ್ಥೆ ಮಾಡಿದ್ದೇನೆ. ಸೆಕ್ಯುರಿಟಿ ಗಾರ್ಡ್ ಕೆಲಸ ಬಿಟ್ಟಿದ್ದಾನೆ. ಸಿ.ಸಿ. ಟೀವಿ ಕ್ಯಾಮೆರಾದಲ್ಲಿ ನಿಮಗೇನೂ ಸಿಗದು. ಇನ್ನು ನನ್ನ ಅಲಬೈ ಕೂಡಾ ಸ್ಟ್ರಾಂಗ್ ಆಗಿದೆ. ತಿಪ್ಪರಲಾಗ ಹಾಕಿದರೂ ನಿಮಗೆ ನಾನೇ ಕೊಲೆಗಾರ ಅಂತಾ ಸಾಬೀತು ಮಾಡಲಾಗದು” ಎಂದ ಅವನ ಧ್ವನಿಯಲ್ಲಿ ಅಹಂಕಾರ ತುಂಬಿತ್ತು. ಮತ್ತೊಮ್ಮೆ ತನ್ನ ಗ್ಲಾಸ್ ಅನ್ನು ಭರ್ತಿ ಮಾಡಿಕೊಂಡ.

“ನಿಜ ಸಾರ್, ನಿಮ್ಮ ಮೇಲೆ ಯಾವ ಸಾಕ್ಷಿಯೂ ಈಗ ಇಲ್ಲ. ಮುಂದೆ ಸಿಗಬಹುದು. ಇಲ್ಲ, ಸಿಗದೆಯೂ ಇರಬಹುದು. ಪೊಲೀಸರು ಆಗಲೇ ನಿಮ್ಮನ್ನು ಆಪಾದನೆಯಿಂದ ಮುಕ್ತಿಗೊಳಿಸಲು ರಿಪೋರ್ಟ್ ತಯಾರು ಮಾಡುತ್ತಿದ್ದಾರೆ. ಅದರಿಂದ ನೀವು ಬಚಾವ್ ಆಗಬಹುದು. ಆದರೆ ಎಲ್ಲ ಸಾಕ್ಷಿಗಳಿಗಿಂತ ಪ್ರಮುಖವಾದ ಸಾಕ್ಷಿ ಮನಃಸಾಕ್ಷಿ... ಅದಕ್ಕೆ ಯಾರ ಹಂಗೂ ಇಲ್ಲ. ಇವತ್ತು ನೀವು ಅದನ್ನು ಗೆಲ್ಲಬಹುದು. ಆದರೆ ಅದರ ಭಾರ ನಂತರದ ದಿನಗಳಲ್ಲಿ ತಡೆಯಲಾಗದು. ಅದು ಎಷ್ಟು ಭಾರ ಇರುತ್ತದೆಯೋ ಸಾವು ಅಷ್ಟೇ ನಿಧಾನ ಹಾಗೂ ನೋವಿನಿಂದ ತುಂಬಿರುತ್ತದೆ.”

“ವೇದಾಂತ ಹೇಳ್ತಾ ಇದ್ದೀರಾ? ನಾನೂ ಇವೆಲ್ಲ ಬೇಕಾದಷ್ಟು ಓದಿದ್ದೇನೆ. ನನ್ನ ಕತೆಗಳಲ್ಲಿ ಬರೆದಿದ್ದೇನೆ ಕೂಡಾ...”

“ಈಗ ಅದು ವೇದಾಂತ ಸಾರ್, ಅನುಭವಿಸುವಾಗ? ಇಲ್ಲಿಯವರೆಗೆ ನಿಮ್ಮ ಈ ದುಷ್ಟ ಮುಖವನ್ನು ಮುಚ್ಚಿಟ್ಟಿದ್ದೀರಿ... ಈಗ ನನಗೆ ಗೊತ್ತಾಯಿತು, ನಾಳೆ ಇನ್ಯಾರಿಗೆ ಗೊತ್ತಾಗುತ್ತದೋ ಎಂಬ ಭಯ ನಿಮ್ಮಲ್ಲಿ ಕಾಡತೊಡಗುತ್ತದೆ. ಅದು ನಿಮ್ಮನ್ನು ಜೀವಿಸಲು ಬಿಡದು. ಯಾರನ್ನು ನೋಡಿದರೂ ಸಂಶಯ ಪಡುವಂತಾಗುತ್ತದೆ. ಈ ಪಾಪ ಪ್ರಜ್ಞೆಯ ನೋವು ಸಾಯುವವರೆಗೂ ಇರುತ್ತದೆ. ಸತ್ತ ಮೇಲೂ ಇರುತ್ತದೆ. ಆಗ ಯಾರಿಗೂ ಹೇಳಿಕೊಳ್ಳಲಾಗದು. ನಿಮ್ಮ ಪ್ರಶ್ನೆಗೆ ನೀವೇ ಉತ್ತರ ಕಂಡುಕೊಳ್ಳಬೇಕು.”

ಕೈಲಿದ್ದ ಗ್ಲಾಸ್ ಕೆಳಗಿಟ್ಟ ಕಾಮತ್, “ಉಪದೇಶ ಮುಗಿದರೆ ತಾವು ಹೊರಡಬಹುದು. ನನ್ನ ಕೆಲಸ ನಾನು ಮಾಡುತ್ತೇನೆ. ನಿಮ್ಮ ಸಹಕಾರಕ್ಕೆ ಧನ್ಯವಾದ” ಎಂದ. ಮತ್ತೆ ಅವನ ಕಣ್ಣುಗಳು ಸಂಧಿಸಿದವು. ಅದೇ ಆಕರ್ಷಣೆ, ಆದರೆ ಈ ಬಾರಿ ದೃಷ್ಟಿ ತಿರುಗಿಸಲಾಗದು. ಅವನ ಕಣ್ಣನ್ನೇ ನೋಡುತ್ತಾ ನಿಂತ.

“ನಿಮಗೆ ಇಡೀ ರಾತ್ರಿಯ ಸಮಯ ಇದೆ ಸಾರ್, ಯೋಚಿಸಿ. ತಪ್ಪನ್ನು ಒಪ್ಪಿಕೊಂಡರೆ ಪ್ರಾಯಶ್ಚಿತ. ಆಮೇಲೆ ಜೀವನ, ಸಾವು ನಿರಾಳ. ಇಲ್ಲದಿದ್ದರೆ ಜೀವನ ಪೂರ್ತಿ ಪ್ರತಿಸ್ಪರ್ಧಿಯನ್ನು ಎದುರಿಸಲಾಗದೇ, ಹೇಡಿಯಂತೆ ಅವನನ್ನು ಕೊಲೆ ಮಾಡಿದೆ ಎಂಬ ಸತ್ಯದೊಂದಿಗೇ ಬದುಕಬೇಕು. ಅವನ ಕುಟುಂಬದವರಿಗೆ ಅನ್ಯಾಯ ಮಾಡಿದೆ ಎಂಬ ನೋವು ಸಹಿಸಿಕೊಳ್ಳಬೇಕು. ಮುಗ್ಧ ಹುಡುಗಿಯೊಬ್ಬಳ ಸಂಸಾರ ಹಾಳು ಮಾಡಿದೆ ಅನ್ನುವ ಕೊರಗನ್ನು